## ನಿಮ್ಮೊಡನೆ

# ಶೌಚಾಲಯ: ಜನಜಾಗೃತಿ ಮೂಡಲಿ, ಸ್ವಚ್ಛತೆಯ ಮಹತ್ವದ ಅರಿವು ವ್ಯಾಪಕವಾಗಲಿ

> ಸಾರ್ವಜನಿಕ ಶೌಚಾಲಯಗಳ ಅಗತ್ಯ ಮತ್ತು ಅವುಗಳನ್ನು ಶುಚಿಯಾಗಿಡುವುದರ ಮಹತ್ವವು ನಮ್ಮ ಅಧಿಕಾರಸ್ಥರಿಗೆ ಇನ್ನೂ ಮನವರಿಕೆಯಾಗಿಲ್ಲ. ದೇಶದಲ್ಲಿ ಇಂದಿಗೂ ಶೌಚಾಲಯ ಹೊಂದಿಲ್ಲದ ಮನೆಗಳು ಲಕ್ಷಾಂತರ ಸಂಖ್ಯೆಯಲ್ಲಿ ಇವೆ.

ಮಹಾತ್ಮ ಗಾಂಧಿ ಅವರ 154ನೇ ಜನ್ಮದಿನವನ್ನು ದೇಶ ಈಚೆಗಷ್ಟೇ ಆಚರಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅತ್ಯಂತ ನೆಚ್ಚಿನ ಮತ್ತು ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾದ ‘ಸ್ವಚ್ಛ ಭಾರತ ಅಭಿಯಾನ’ಕ್ಕೆ ಚಾಲನೆ ದೊರೆತು ಒಂಬತ್ತು ವರ್ಷಗಳಾಗಿವೆ. 2014ರ ಅಕ್ಟೋಬರ್ 2ರಂದು ಈ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಬಯಲು ಮಲವಿಸರ್ಜನೆ, ಕಸದ ರಾಶಿಯಂಥವುಗಳಿಂದ ದೇಶವನ್ನು ಮುಕ್ತಗೊಳಿಸಲು ಪ್ರಧಾನಿಯವರು ಆ ಸಂದರ್ಭದಲ್ಲಿ ದೇಶ ಬಾಂಧವರಿಗೆ ಐದು ವರ್ಷ ಸಮಯ ಕೊಟ್ಟಿದ್ದರು. ಆಗ ಅವರು ಹೀಗೆ ಹೇಳಿದ್ದರು: ‘2019ರಲ್ಲಿ ಗಾಂಧೀಜಿಯ 150ನೇ ಜನ್ಮದಿನಕ್ಕೆ ಸ್ವಚ್ಛ ಭಾರತ ನಾವು ಅವರಿಗೆ ಸಲ್ಲಿಸಬಹುದಾದ ಅತ್ಯುತ್ತಮವಾದ ನಮನ’. ಅವರು ಕೊಟ್ಟ ಗಡುವು ಮುಗಿದು ನಾಲ್ಕು ವರ್ಷಗಳಾಗಿವೆ. ಆದರೆ ಉದ್ದೇಶ ಈಡೇರಿಲ್ಲ ಎಂಬುದಕ್ಕೆ ಹೆಜ್ಜೆಹೆಜ್ಜೆಗೂ ನಿದರ್ಶನಗಳು ಸಿಗುತ್ತವೆ.

‘ಭಾರತ, ಬಯಲು ಬಹಿರ್ದೆಸೆಮುಕ್ತ ದೇಶವಾಗಿದೆ’ ಎಂದು ಕೇಂದ್ರ ಸರ್ಕಾರ ಘೋಷಿಸಿ ನಾಲ್ಕು ವರ್ಷಗಳಾಗಿವೆ. ರಾಜ್ಯ ಸರ್ಕಾರಗಳ ಸ್ವಯಂಘೋಷಣೆಯ ಆಧಾರದ ಮೇಲೆ ಕೇಂದ್ರ ಈ ಘೋಷಣೆ ಹೊರಡಿಸಿತು. ಆದರೆ ದೇಶದಲ್ಲಿ ಇಂದಿಗೂ ಶೌಚಾಲಯ ಹೊಂದಿಲ್ಲದ ಮನೆಗಳು ಲಕ್ಷಾಂತರ ಸಂಖ್ಯೆಯಲ್ಲಿ ಇವೆ ಎಂಬುದನ್ನು ದೃಢಪಡಿಸಿಕೊಳ್ಳಲು ವಿಶೇಷವಾದ ಅಧ್ಯಯನಗಳೇನೂ ಬೇಕಾಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅಡ್ಡಾಡಿದರೆ ಯಾರಿಗಾದರೂ ಕಣ್ಣಿಗೆ ಬೀಳುವಂತಹ ಕಹಿಸತ್ಯವಿದು. ಶೌಚಾಲಯಗಳನ್ನು ನಿರ್ಮಿಸಿಕೊಂಡಿದ್ದರೂ ಅನೇಕ ಕಡೆ ಅವುಗಳ ಸ್ಥಿತಿ ಶೋಚನೀಯ. ಕೆಲವರು ಅವುಗಳನ್ನು ಬಳಸುತ್ತಲೂ ಇಲ್ಲ. ಬಳಸದೇ ಇರುವುದಕ್ಕೆ ಅವರದೇ ಆದ ಕಾರಣಗಳೂ ಇವೆ.

ಸ್ವಚ್ಛತೆಯ ಅಭಿಯಾನ ಸಂಪೂರ್ಣ ಯಶಸ್ಸು ಕಾಣದಿದ್ದರೂ ಇದೊಂದು ಒಳ್ಳೆಯ ಯೋಜನೆ, ಇದರ ಅಗತ್ಯ ಬಹಳ ಇದೆ ಎಂದು ನಮ್ಮಲ್ಲಿ ಅನೇಕರು ಭಾವಿಸಿದ್ದಾರೆ. ನಗರೀಕರಣ ಪ್ರಕ್ರಿಯೆ ದೇಶದಾದ್ಯಂತ ಹೆಚ್ಚು ವೇಗ ಪಡೆದಿದೆ. ಪರಿಣಾಮವಾಗಿ ಭಾರಿ ಪ್ರಮಾಣದಲ್ಲಿ ಗೃಹ ತ್ಯಾಜ್ಯ ಮತ್ತು ಕೈಗಾರಿಕಾ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಆದರೆ ಈ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಮತ್ತು ಸಂಸ್ಕರಿಸಲು ನಮಗೆ ಸಾಧ್ಯವಾಗುತ್ತಿಲ್ಲ ಎಂಬುದಕ್ಕೆ ಬೆಂಗಳೂರು ನಗರವೇ ಒಂದು ನಿದರ್ಶನವಾಗಿ ನಮ್ಮ ಎದುರು ನಿಲ್ಲುತ್ತದೆ.


ರಾಜ್ಯದ ಸಾವಿರಾರು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳಿಲ್ಲ. ಈ ಸಂಬಂಧದ ಮಾಧ್ಯಮ ವರದಿಗಳನ್ನು ಪರಿಗಣಿಸಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ‘ಎಲ್ಲ ಶಾಲೆಗಳಲ್ಲಿ 2019ರ ಅಕ್ಟೋಬರ್ 1ರೊಳಗೆ ಶೌಚಾಲಯಗಳನ್ನು ಕಡ್ಡಾಯವಾಗಿ ನಿರ್ಮಿಸಬೇಕು’ ಎಂದು ಹಿಂದೊಮ್ಮೆ ಆದೇಶ ಹೊರಡಿಸಿದ್ದರು. ಆ ಗಡುವಿನ ನಂತರವೂ ಶಾಲೆಗಳಲ್ಲಿ ಶೌಚಾಲಯಗಳಿಲ್ಲದ ದೂರುಗಳು ಬಂದಲ್ಲಿ ಕರ್ತವ್ಯಲೋಪ ಎಂದು ಪರಿಗಣಿಸಿ, ಜಿಲ್ಲಾ ಉಪನಿರ್ದೇಶಕರ (ಆಡಳಿತ) ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು 2019ರ ಜುಲೈನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಆದೇಶ ಹೊರಡಿಸಿತ್ತು. ವಸ್ತುಸ್ಥಿತಿ ಗಮನಿಸಿದರೆ, ಇಂತಹ ಆದೇಶ, ಗಡುವುಗಳಿಗೆ ಚಿಕ್ಕಾಸಿನ ಬೆಲೆಯೂ ದೊರೆತಂತಿಲ್ಲ ಎಂಬುದು ಮನವರಿಕೆಯಾಗುತ್ತದೆ.

ಅಸಮರ್ಪಕ ಶೌಚ ನೈರ್ಮಲ್ಯ ವ್ಯವಸ್ಥೆಯಿಂದಾಗಿ ಅಂತರ್ಜಲ ಕಲುಷಿತಗೊಳ್ಳುತ್ತಿದೆ. ವಿಶ್ವದಾದ್ಯಂತ ಇಂದಿಗೂ 67 ಕೋಟಿ ಜನ ಬಯಲು ಶೌಚಾಲಯವನ್ನೇ ಅವಲಂಬಿಸಿದ್ದಾರೆ. ನಮ್ಮಲ್ಲಿ ಸುಮಾರು 30 ಕೋಟಿ ಮಹಿಳೆಯರಿಗೆ ಸಮರ್ಪಕ ಶೌಚಾಲಯ, ಸ್ನಾನದ ಮನೆಯ ವ್ಯವಸ್ಥೆ ಇಲ್ಲ ಎಂದು ಕೆಲವು ಅಧ್ಯಯನ ವರದಿಗಳು ಗುರುತಿಸಿವೆ. ‘ಸ್ವಚ್ಛ ಭಾರತ’ ಯೋಜನೆ ಆರಂಭಿಸಿದ ನಂತರ, ಗ್ರಾಮೀಣ ಯೋಜನೆ ಅಡಿಯಲ್ಲಿ 11 ಕೋಟಿಗೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎಂದು ಕೇಂದ್ರ ಸರ್ಕಾರದ ದಾಖಲೆಗಳು ಹೇಳುತ್ತವೆ. ಹೀಗಿದ್ದರೂ ಬಹಿರ್ದೆಸೆಗೆ ಈಗಲೂ ಬಯಲನ್ನೇ ನೆಚ್ಚಿಕೊಂಡವರ ಸಂಖ್ಯೆ ಕಡಿಮೆಯೇನಿಲ್ಲ.

ಸಾರ್ವಜನಿಕ ಶೌಚಾಲಯಗಳ ಸ್ಥಿತಿಯಂತೂ ಮತ್ತಷ್ಟು ದಯನೀಯವಾಗಿದೆ. ಬೆಂಗಳೂರಿನಂಥ ಮಹಾನಗರದಲ್ಲಿ ಕೂಡ ಸಾರ್ವಜನಿಕ ಶೌಚಾಲಯ ನಿರ್ವಹಣೆ ಸಮರ್ಪಕವಾಗಿಲ್ಲ. ನಗರದಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದ ಪ್ರಕರಣವೊಂದರ ವಿಚಾರಣೆಯು ಹೈಕೋರ್ಟ್‌ನಲ್ಲಿ ಮೂರು ವರ್ಷಗಳಿಂದ ನಡೆಯುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ವಾರಗಳಲ್ಲಿ ವಿವರವಾದ ವರದಿ ಸಲ್ಲಿಸಬೇಕು ಎಂಬ ಹೈಕೋರ್ಟ್ ಆದೇಶವು ಪಾಲನೆಯಾಗಿಲ್ಲ ಎಂಬ ಕಾರಣಕ್ಕೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಇತ್ತೀಚೆಗೆ ₹ 5 ಲಕ್ಷ ದಂಡ ವಿಧಿಸಿದೆ. ನಮ್ಮ ಆಡಳಿತ ವ್ಯವಸ್ಥೆ ಆ ಮಟ್ಟಿಗೆ ಜಡ್ಡುಗಟ್ಟಿದೆ.

ಸಾರ್ವಜನಿಕ ಶೌಚಾಲಯಗಳ ಅಗತ್ಯ ಮತ್ತು ಅವುಗಳನ್ನು ಶುಚಿಯಾಗಿಡುವುದರ ಮಹತ್ವವು ನಮ್ಮ ಅಧಿಕಾರಸ್ಥರಿಗೆ ಇನ್ನೂ ಮನವರಿಕೆಯಾಗಿಲ್ಲ. ಬಸ್ ನಿಲ್ದಾಣಗಳಲ್ಲಿ ಸಾವಿರಾರು ಮಂದಿ ಸೇರುತ್ತಾರೆ. ಅಲ್ಲಿನ ಶೌಚಾಲಯಗಳ ಸ್ಥಿತಿಯು ವಾಕರಿಕೆ ಬರಿಸುವಂತೆ ಇರುತ್ತದೆ. ಮಹಿಳೆಯರ ಪಾಡು ಹೇಳತೀರದು. ಜನಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಮತ್ತು ಅವು ಶುಚಿಯಾಗಿ ಹಾಗೂ ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂಬುದನ್ನು ನಮ್ಮ ಆಡಳಿತ ವ್ಯವಸ್ಥೆಯು ಆದ್ಯತೆಯ ವಿಷಯವಾಗಿ ಇನ್ನೂ ಪರಿಗಣಿಸಿದಂತಿಲ್ಲ ಎಂಬುದು ಅತ್ಯಂತ ದುರದೃಷ್ಟಕರ ಸಂಗತಿ.

■ ಎನ್. ಉದಯಕುಮಾರ್


ಈಶ್ವರ್